(3) ಸುಳ್ಯ ತಾಲ್ಲೂಕಿನಲ್ಲಿ ಕೋಮು ಗಲಭೆಯಲ್ಲಿ ಹಾನಿಗೊಳಗಾದವರಿಗೆ ಪರಿಹಾರ.

ಶ್ರೀ ಕೆ. ಕುಶಾಲ : ಮಾನ್ಯ ಅಧ್ಯಕ್ಷರೆ ಸುಳ್ಯ ತಾಲೂಕಿನಲ್ಲಿ ಕಳೆದ ಫೆಬ್ರುವರಿ ತಾರೀಖು 1 ರಂದು ನಡೆದ ಕೋಮು ಕಲಬೆಯ ದುರ್ಘಟನೆಯಿಂದ ಈ ತನಕ ಬೆಂಕಿಗಾಹುತಿಯಾದ ಒಟ್ಟು ಕುಟುಂಬಗಳು ಹಾಗೂ ಕಟ್ಟಡಗಳು ಎಷ್ಟು? ಇದರಲ್ಲಿ ಹಿಂದೂ ಭಾಂದವರ ಕುಟುಂಬಗಳು ಹಾಗೂ ಕಟ್ಟಡಗಳು ಎಷ್ಟು? ಮುಸ್ಲಿಂ ಬಾಂಧವರ ಕುಟುಂಬಗಳು ಹಾಗೂ ಕಟ್ಟಡಗಳು ಎಷ್ಟು? ಇದರಲ್ಲಿ ಗರಿಷ್ಟ ಮೊತ್ತದಲ್ಲಿ ಒಂದು ಕುಟುಂಬಕ್ಕೆ ಪರಿಹಾರ ರೂಪದಲ್ಲಿ ನೀಡಿದ ಹಣದ ಮೊತ್ತ ಎಷ್ಟು?

ಈ ತನಕ ನತದೃಷ್ಟ ಕುಟುಂಬದವರಿಗೆ ಉಂಟಾದ ನಷ್ಟದ ಬಗ್ಗೆ ಸರಕಾರ ಹೆಚ್ಚಿನ ಪರಿಹಾರ ನೀಡುವ ಕ್ರಮ ಕೈಕೊಳ್ಳಲಾಗಿದೆಯೇ? ಈ ದುರ್ಘಟನೆಯಿಂದ ಮನೆಮಾರು ಕಳೆದುಕೊಂಡ ಕುಟುಂಬದವರಿಗೆ ನಿಬಡ್ಡಿ ಸಾಲವನ್ನು ಒಬ್ಬರಿಗೆ ಎಷ್ಟು ಮೆತ್ತ ನೀಡುವಂತೆ ಸರಕಾರದ ಆದೇಶವಿರುವುದು? ಈ ಸಂತ್ರಸ್ತ ಕುಟುಂಬದವರಿಗೆ ಹೆಚ್ಚಿನ ಪರಿಹಾರ ಹಾಗೂ ನಿಬಡ್ಡಿ ಸಾಲ ನೀಡುವಂತೆ ಸರಕಾರ ಈ ಹಿಂದೆ ಇದ್ದ ಹಳೆ ನಿಯಮಾಳಿಯನ್ನು ಬದಲಾಯಿಸಿ ಹೊಸ ನಿಯಮಾವಳಿಯನ್ನು ಕೈಕೊಂಡು ಕ್ರಮ ತೆಗೆದುಕೊಳ್ಳಲಾಗುವುದೇ? ಇಲ್ಲವಾದಲ್ಲಿ ಈ ಕುರಿತು ಸೂಕ್ತಕ್ರಮವನ್ನು ಕೈಕೊಳ್ಳುವಂತೆ ಸರಕಾರವನ್ನು ಈ ಮೂಲಕ ಆಗ್ರಹ ಪಡಿಸುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ದಿನಾಂಕ 31-1-1991 ರಂದು ಪೇಜಾವರ ಸ್ವಾಮೀಜಿಯವರು ಉಡುಪಿಯಿಂದ ಮೈಸೂರಿಗೆ ಹೊಗುತ್ತಿದ್ದಾಗ ಅವರ ಕಾರಿನ ಮುಂದೆ ಸಾಗುತ್ತಿದ್ದ ಟಿಂಪೋಗೆ ಕೆಲವು ದುಷ್ಕರ್ಮಿಗಳು ಮಡವಾಯಿ ಹಳ್ಳಿಯ ಹತ್ತಿರ ಕಲ್ಲು ತೂರಿದ್ದರಿಂದ ದಿನಾಂಕ 1-2-1991 ರಂದು ಸುಳ್ಯದಲ್ಲಿ ಲೂಟಿ ದೊಂಬಿ ನಡೆದು ಸುತ್ತಮುತ್ತಲಿನ ಹಳ್ಳಿಗಳಾದ ಜಲಸೂರು, ಅಲಟ್ಟಿ ಮತ್ತು ಹರ್ಲಂಕಗಳಲ್ಲಿ ಕೆಲವು ಅಂಗಡಿ ಮತ್ತು ಮನೆಗಳಿಗೆ ಬೆಂಕಿ ಹಚ್ಚಿದ್ದರಿಂದ ರೂ.1,30,04,495-00 ಗಳಷ್ಟು ಮೌಲ್ಯದ ಆಸ್ತಿಗೆ ನಷ್ಟವುಂಟಾಗಿದೆ. ಈ ಆಸ್ತಿಯಲ್ಲಿ ರೂ.23,61,760-00ಗಳ ಆಸ್ತಿಯು ಹಿಂದುಗಳಿಗೆ ಸೇರಿದ್ದು ರೂ.1,06,42,735-00 ಗಳ ಮೌಲ್ಯದ ಆಸ್ತಿಯು ಮುಸ್ಲಿಮರಿಗೆ ಸೇರಿರುತ್ತದೆ. ಸರ್ಕಾರ ಸದರಿ ಗಲಭೆಯಲ್ಲಿ ಹಾನಿಕೊಳಗಾದವರಿಗೆ ಪರಿಹಾರ ಮಂಜೂರು ಮಾಡಲು ರೂ.28,00,000-00 ಗಳನ್ನು ಮಂಜೂರು ಮಾಡಿದ್ದು, ಅದರಲ್ಲಿ 43 ಜನ ಹಿಂದುಗಳಿಗೆ ರೂ.3,71,970-00 ಗಳನ್ನು ಹಾಗೂ 121ಜನ ಮುಸ್ಲಿಮರಿಗೆ ರೂ.11,61,225-00ಗಳ ಪರಿಹಾರವನ್ನು ಈಗಾಗಲೇ ಪಾವತಿ ಮಾಡಲಾಗಿದೆ.

ಈ ಗಲಭೆಗೆ ಸಂಬಂಧಿಸಿದ 170 ಮೊಕದ್ದಮೆಗಳನ್ನು ದಾಖಲು ಮಾಡಿಕೊಳ್ಳಲಾಗಿದ್ದು, 113 ಜನರನ್ನು ಬಂಧಿಸಲಾಗಿದೆ. ಅವರಲ್ಲಿ 69 ಜನರು ನ್ಯಾಯಾಂಗ ಕಸ್ಟಡಿಯಲ್ಲಿರುತ್ತಾರೆ. ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಡಿ : 715:ಎಸ್‌ಎಸ್‌ಟಿ:91 ದಿನಾಂಕ : 10-10-1990ರ ಪ್ರಕಾರ ಕೊಮುಗಲಭೆಯಲ್ಲಿ ಆಸ್ತಿಯನ್ನು ಕಳೆದುಕೊಂಡ ಯಾವುದೇ ವ್ಯಕ್ತಿಗೆ ರೂ.20,000-00ಗಳ ಗರಿಷ್ಠ ಮೊತ್ತದ ಪರಿಹಾರ ನೀಡಲು ಅವಕಾಶವಿದೆ. ಇದಲ್ಲದೆ ನಷ್ಟ ಹೊಂದಿದ ಆಸ್ತಿಯ ಒಟ್ಟು ಮೌಲ್ಯದ ಶೇ.30ರಷ್ಟು ಅಥವ ರೂ.50,000-00ಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಬಡ್ಡಿರಹಿತ ಸಾಲವನ್ನಾಗಿ ಮಂಜುರು ಮಾಡಬಹುದಾಗಿರುತ್ತದೆ. ದಿನಾಂಕ 10-10-90ರ ಸರ್ಕಾರಿ ಆದೇಶದಲ್ಲಿ ಹೇಳಿರುವ ಪರಿಹಾರದ ದರಗಳನ್ನು ದಿನಾಂಕ : 1-9-90ರಿಂದ ಅನ್ವಯವಾಗುವಂತೆ ಹೆಚ್ಚಿಸಿರುವುದರಿಂದ, ಈಗ ಮತ್ತೆ ಅವುಗಳನ್ನು ಹೆಚ್ಚಿಸುವ ಅವಶ್ಯಕತೆ ಕಂಡುಬಂದಿರುವುದಿಲ್ಲ.